# 3. ಚತುರ ನಿರಂಜನ

ಸುಧಾಮೂರ್ತಿ

ನಿರಂಜನ ಸಿರಿವಂತನಲ್ಲ , ಬಹಳ ವಿದ್ಯಾವಂತನೂ ಅಲ್ಲ, ಆದರೆ ತುಂಬಾ ಜಾಣ. ಒಂದು ದಿನ ಆತ ಬೇರೆ ಊರಿಗೆ ಹೋಗುವಾಗ ದಾರಿಯಲ್ಲಿ ಸಿದ್ದಪ್ಪ ಸಿಕ್ಕ. ಆತನ ಮುಖ ಕಂದಿತ್ತು. ಕೈಯಲ್ಲಿ ಕುದುರೆ ಬಾಲ ಮಾತ್ರವಿದ್ದಿತ್ತು.

''ಯಾಕೋ ಸಿದ್ದಪ್ಪ ?'' ಎಂದ ನಿರಂಜನ.

''ನನ್ನ ಕುದುರೆ ಅಪಘಾತದಲ್ಲಿ ಸತ್ತು ಹೋಯಿತು. ಅದರ ಶವವನ್ನು ನರಿ ಎಳೆದುಕೊಂಡು ಹೋಗಿದೆ. ಅದರ ಬಾಲ ಮಾತ್ರ ಉಳಿದಿದೆ'' ಎಂದು ದುಃಖಿಸಿದ ಸಿದ್ದಪ್ಪ.

ಸಿದ್ದಪ್ಪ ಬಡವ ಇನ್ನೊಂದು ಕುದುರೆ ತರುವುದು ಕಷ್ಟವೇ.

ಅದಕ್ಕೆ ನಿರಂಜನ, ಸಿದ್ದಪ್ಪ ನೀನು ಬಾಲ ಮಾತ್ರ ಕೊಡು. ನಾನು ನಿನಗೆ ಒಳ್ಳೆಯ ಕುದುರೆಯೊಂದನ್ನು ತಂದು ಕೊಡುತ್ತೇನೆ.'' ಎಂದ.

''ಬಾಲದಿಂದ ಕುದುರೆ ಬರುತ್ತದಾ ?'' ಎಂದ ಸಿದ್ದಪ್ಪ.

''ಅದರ ಯೋಚನೆ ನಿನಗೇಕೆ ? ಕುದುರೆಯನ್ನು ತಂದುಕೊಟ್ಟರೆ ಆಯಿತಲ್ಲ'' ಎಂದು ನಿರಂಜನ ಬಾಲ ಹಿಡಿದುಕೊಂಡು ಮುಂದೆ ಹೊರಟ.

ಸ್ವಲ್ಪ ದೂರದಲ್ಲಿ ಒಂದು ಮೊಲದ ಬಿಲ ಕಂಡುಬಂತು. ನಿರಂಜನ ಆ ಬಿಲದಲ್ಲಿ ಬಾಲತೂರಿಸಿ ದಾರಿಹೋಕರಿಗಾಗಿ ಕಾಯುತ್ತಾ ಕುಳಿತ.

ಅದೇ ಸಮಯಕ್ಕೆ ಆ ದಾರಿಯಲ್ಲಿ ಒಬ್ಬ ದುರಾಸೆ ಸಿರಿವಂತ ಕುದುರೆ ಮೇಲೆ ಬಂದ. ಕುದುರೆಯ ಖುರಪುಟದ ಸದ್ದು ಕೇಳಿದ ತಕ್ಷಣ ನಿರಂಜನ ಕುದುರೆ ಬಾಲ ಗಟ್ಟಿಯಾಗಿ ಹಿಡಿದುಕೊಂಡ ಕುಳಿತ.

''ನೀನು ಯಾರು ? ಇದೇನು ಕುದುರೆ ಬಾಲ ಹಿಡಿದುಕೊಂಡು ಕುಳಿತ್ತಿದ್ದೀಯೆ ? ಎಂದ ಆ ಕುದುರೆ ಸವಾರ.

''ನಾನು ಕುದುರೆ ಮೇಯಿಸಲು ಬಂದಿದ್ದೆ. ಆ ಬಿಲದ ಕೆಳಗೆ ನಿಧಿ ಇದೆಯಂತೆ. ನನ್ನ ಕುದುರೆ ವಿಶೇಷ ಶಕ್ತಿಯುಳ್ಳದ್ದು. ಎಲ್ಲಿಯೇ ನಿಧಿ ಇದ್ದರೂ ಅದಕ್ಕೆ ಕಂಡುಹಿಡಿಯುವ ಜ್ಞಾನ ಅದಕ್ಕಿದೆ. ಅದು ಈ ಬಿಲದ ಒಳಗೆ ಹೋಗುತ್ತಿತ್ತು. ನಾನೂ ಅದರ ಜೊತೆಗೆ ಹೋಗಬೇಕೆಂದು ಪ್ರಯತ್ನಪಟ್ಟೆ, ಅಷ್ಟರಲ್ಲಿ ಅದು ಬಿಲದ ಒಳಗೆ ನುಸುಳಿತು. ಅದಕ್ಕೆ ನಾನು ಬಾಲ ಹಿಡಿದುಕೊಂಡಿದ್ದೇನೆ. ಇನ್ನೇನು ನಿಧಿ ಸಿಕ್ಕಿರಬಹುದು, ನಾನು ಒಳಗೆ ಹೋಗಿ ತರಬೇಕು ಎಂದ ನಿರಂಜನ.

ಕುದುರೆ ಸವಾರನ ಮನಸ್ಸಿನಲ್ಲಿ ಆಸೆ ಚಿಗುರೆಗೊಂಡಿತು. ಅದನ್ನು ಗಮನಿಸಿ ನಿರಂಜನ ನಿಧಿ ತುಂಬಾ ಇರಬಹುದು. ಅದನ್ನು ಹಾಕಿಕೊಳ್ಳಲು ನನ್ನ ಬಳಿ ಚೀಲವೂ ಇಲ್ಲ, ನಿಮ್ಮ ಕುದುರೆಯ ಮೇಲಿರುವ ಚೀಲವನ್ನು ಕೊಟ್ಟರೆ ನಾನು ಹಣವನ್ನು ಕೊಡುತ್ತೇನೆ ಎಂದ.

ಅದಕ್ಕೆ ಆ ಕುದುರೆ ಸವಾರ ''ಈ ಚೀಲದಲ್ಲಿ ತೂತಿದೆ, ನೀನು ನನ್ನ ಕುದುರೆಯೇರಿ ಊರಿಗೆ ಹೋಗಿ ಎರಡು ಗಟ್ಟಿಯಾದ ಚೀಲ ತೆಗೆದುಕೊಂಡು ಬಾ. ಅಷ್ಟರವರೆಗೆ ನಾನು ಕುದುರೆಯ ಬಾಲ ಹಿಡಿದಿರುತ್ತೇನೆ'' ಎಂದ.

ಕುದುರೆ ಸವಾರನ ಕುದುರೆ ಗಟ್ಟಿಮುಟ್ಟಾಗಿತ್ತು.

ಅದಕ್ಕೆ ನಿರಂಜನ, ''ನಾನು ಊರೊಳಗೆ ಹೋಗಿ ಬರಲು ಇನೊಂದರ್ಧ ಗಂಟೆಯಾಬಹುದೇನೋ, ಅಲ್ಲಿಯವರೆಗೂ ನೀವು ಗಟ್ಟಿಯಾಗಿ ಈ ಬಾಲ ಹಿಡಿದಿರಿ'' ಎಂದು ಕುದುರೆಯನ್ನು ಏರಿ ಕ್ಷಣದಲ್ಲಿ ಮಾಯವಾದ.

''ಅಯ್ಯೋ ಪೆದ್ದ. ನನ್ನ ಮಾತು ನಂಬಿ ಚೀಲ ತರಲು ಊರಿಗೆ ಹೋಗಿದ್ದಾನೆ. ಊರಿಗೆ ಹೋಗಿ ಬರಲು ಎರಡು ಗಂಟೆಯೇ ಬೇಕು, ಅಷ್ಟರಲ್ಲಿ ನಾನು ನಿಧಿಯನ್ನು ಹೊತ್ತುಕೊಂಡು ಈ ಕುದುರೆ ಏರಿ ಹೋಗಿರುತ್ತೇನೆ'' ಎಂದುಕೊಂಡ ಕುದುರೆ ಸವಾರ.

ಅರ್ಧ ಗಂಟೆಯಾದರೂ ಕುದುರೆಯೂ ಬರಲಿಲ್ಲ ನಿರಂಜನನೂ ಬರಲಿಲ್ಲ. ಕುದುರೆ ಸವಾರ ಸ್ವಲ್ಪ ಗಟ್ಟಿಯಾಗಿಯೇ ಕುದುರೆಯ ಬಾಲವನ್ನು ಎಳೆದ. ಅವನು ಎಳೆದ ರಭಸಕ್ಕೆ ಹಿಂತಿರುಗಿ ಬಿದ್ದ. ಬಾಲ ಅವನ ಕೈಯಲ್ಲಿ ಬಂದಿತು. ಬಿಲದಲ್ಲಿ ಕುದುರೆ ಬಿಡಿ, ಮೊಲ ಸಹಿತ ಇರಲಿಲ್ಲ. ಅವನು ಕಕ್ಕಾಬಿಕ್ಕಿಯಾದ.

ಇತ್ತ ನಿರಂಜನನು ಕುದುರೆಯನ್ನು ಸಿದ್ದಪ್ಪನಿಗೆ ಕೊಟ್ಟು ಕಳುಹಿಸಿದನು. ಸ್ವಲ್ಪ ಸಮಯದ ನಂತರ ಕುದುರೆ ಸವಾರನು ಅಲ್ಲಿಗೆ ಬಂದನು. ಕೂಡಲೇ ನಿರಂಜನನು ''ಏ ಕುದುರೆ ಸವಾರಾ ನೀನು ನಿಧಿಯನ್ನು ಎಲ್ಲಿ ಇಟ್ಟು ಬಂದಿ? ಸತ್ಯ ಹೇಳದಿದ್ದರೆ ರಾಜನಿಗೆ ದೂರು ಕೊಡುತ್ತೇನೆ'' ಎಂದು ಗುಡುಗಿದನು. ಹೆದರಿದ ಕುದುರೆ ಸವಾರ ಕುದುರೆ ಹೋದರೆ ಹೋಗಲಿ ಉಳಿದರೆ ಸಾಕೆಂದು ಕಾಲಿಗೆ ಬುದ್ಧಿ ಹೇಳಿದನು.

**ಶಬ್ದಗಳ ಅರ್ಥ :**

**ಶವ** – ಹೆಣ; **ನಿಧಿ** – ಸಂಪತ್ತು; **ನುಸುಳು** – ನುಗ್ಗು; **ಪೆದ್ದ** – ಮೂರ್ಖ; **ನಂಬು** – ವಿಶ್ವಾಸವಿಡು; **ರಭಸ** – ವೇಗ; **ಕಕ್ಕಾಬಿಕ್ಕಿ** – ದಿಗ್ಭ್ರಮೆ, ಏನೂ ತೋಚದಂತಾಗು.

**ಕೃತಿ: 1) ಕೆಳಗಿನವುಗಳನ್ನು ಸರಿಹೊಂದಿಸಿ ಬರೆಯಿರಿ**

| 'ಅ' ಗುಂಪು | | 'ಬ' ಗುಂಪು |
|---|---|---|
| (1) ನಿರಂಜನ | | (ಅ) ದುರಾಸೆ ಸಿರಿವಂತ |
| (2) ಸಿದ್ದಪ್ಪ | | (ಆ) ತುಂಬಾ ಜಾಣ |
| (3) ಕುದುರೆ ಸವಾರ | | (ಇ) ಒಬ್ಬ ಬಡವ |

**ಕೃತಿ: 2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ?**

1) ''ಯಾಕೋ ಸಿದ್ದಪ್ಪ?''

2) ''ಬಾಲದಿಂದ ಕುದುರೆ ಬರುತ್ತದಾ?''

3) ''ನೀನು ಯಾರು? ಇದೇನು ಕುದುರೆ ಬಾಲ ಹಿಡಿದುಕೊಂಡು ಕುಳಿತಿದ್ದೀಯೇ?''

4) ''ಏ ಕುದುರೆ ಸವಾರಾ, ನೀನು ನಿಧಿಯನ್ನು ಎಲ್ಲಿ ಇಟ್ಟು ಬಂದಿ?''

**ಕೃತಿ: 3) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



**ಕೃತಿ: 4)** **ಕುದುರೆಯ ಉಪಯೋಗ ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ: 5)** **ಕೆಳಗಿನ ಶಬ್ದಗಳಿಗೆ ಉಪಸರ್ಗಯುಕ್ತ ಪದಗಳನ್ನು ಬರೆಯಿರಿ.**

ಉದಾ.ಚಿತ್ರ – ವಿಚಿತ್ರ

ಆಶೆ –

ಯತ್ನ –

ಯೋಗ –

ಖ್ಯಾತ –

**ಕೃತಿ: 6)** **ಕೆಳಗಿನ ಶಬ್ದಗಳ ಕೊನೆಯ ಅಕ್ಷರದಿಂದ ಉಂಟಾಗುವ ಪ್ರತಿ ಅಕ್ಷರಕ್ಕೆ ಮೂರು ಶಬ್ದಗಳನ್ನು ತಯಾರಿಸಿರಿ.**

